

# ಇರ್ಫಾನ್ ನೇರ ಮಾತು

ಬಾಲಿವುಡ್‌ನಲ್ಲಿ ತನ್ನದೇ ಆದ ಅಭಿಮಾನಿಗಳ ದಂಡನ್ನು ಸೃಷ್ಟಿಸಿಕೊಂಡಿರುವ ನಟ ಇರ್ಫಾನ್ ಖಾನ್. ಆತನ ನೇರ ಮಾತು, ಸಾಂಪ್ರದಾಯಕವಲ್ಲದ ಪಾತ್ರಗಳ ಅನುಪಮ ನಿರ್ವಹಣೆ ಪ್ರೇಕ್ಷಕರನ್ನು ಸದಾ ಹುಚ್ಚೆಬ್ಬಿಸುತ್ತದೆ. ಬಾಲಿವುಡ್‌ನ ಬಹಳಷ್ಟು ಖ್ಯಾತನಾಮ ನಟಿಯರೊಂದಿಗೆ ನಟಿಸಿರುವ ಇರ್ಫಾನ್, ನಾನಾ ಪಾಟೇಕರ್‌ನಂತಹ ಕಮರ್ಷಿಯಲ್ ಮೌಲ್ಯವುಳ್ಳ ನಟನಿಗೂ ಸವಾಲೊಡ್ಡಿದವನು. ಈತ ನಟಿಸುತ್ತಿರುವ ಸಿನಿಮಾಗಳೆಲ್ಲವೂ ವಿಭಿನ್ನವೇ. ಇತ್ತೀಚೆಗೆ ತೆರೆಗೆ ಬಂದ 'ಹಿಂದಿ ಮೀಡಿಯಾ' ಪ್ರೇಕ್ಷಕರಿಗೆ ಮೆದುಳು ಮತ್ತು ಹೃದಯ ಎರಡಕ್ಕೂ ಖುಷಿ ಕೊಟ್ಟ ಚಿತ್ರ. ಇದೀಗ 'ಕರೀಬ್ ಕರೀಬ್ ಸಿಂಗಲ್ಲ್' ಎಂಬ ವಿಚಿತ್ರ ಹೆಸರಿನ ಚಿತ್ರವೊಂದರಲ್ಲಿ ಇರ್ಫಾನ್ ಗೆ ಮಲಯಾಳಂನ ಖ್ಯಾತ ನಟಿ ಪಾರ್ವತಿ ಮೆನನ್ ಸಾಥ್ ನೀಡಿದ್ದಾರೆ.

'ಸ್ಟಾರ್ ನಟರ ಕಮರ್ಷಿಯಲ್ ಚಿತ್ರಗಳ ಬಗ್ಗೆ ಜನರಿಗೆ ಅಂತಹ ಒಲವೇನೂ ಇಲ್ಲ. ಅಂತಹ ಚಿತ್ರಗಳನ್ನು ಜನರು ಒಮ್ಮೆ ನೋಡಿ ಮರೆತುಬಿಡುತ್ತಾರೆ ಅಷ್ಟೆ. ಸಿನಿಮಾದಲ್ಲಿ ಕಥಾವಸ್ತು ಮುಖ್ಯ. ಕಂಟೆಂಟ್ ಇರುವ ಚಿತ್ರಗಳನ್ನು, ಆ ಚಿತ್ರಗಳ ನಟರನ್ನು ಜನರು ಯಾವತ್ತೂ ಮರೆಯುವುದಿಲ್ಲ. ಈಗ ನ್ಯೂಟನ್ ಸಿನಿಮಾ ನೋಡಿ ಆಸ್ಕರ್‌ಗೆ ಆಯ್ಕೆಯಾಗಿದೆ' ಎನ್ನುವುದು ಇರ್ಫಾನ್ ಖುಷಿಯ ಮಾತು.



# ಕರೀನಾ ಚಮಕ್

ಹೊಸ ಹುಡುಗಿಯರ ಪ್ರಚಾರದ ಅಬ್ಬರದಲ್ಲಿ ಇತ್ತೀಚೆಗೆ ಕರೀನಾ ಕಪೂರ್ ಹೆಸರೇ ಕೇಳಿಸದಂತಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿರುವ ಪ್ರಿಯಾಂಕಾ ಚೋಪ್ರಾ, 'ಪತ್ರಕರ್ತರ ಡಾರ್ಲಿಂಗ್' ಎನ್ನಿಸಿರುವ ಕಂಗನಾ ಮತ್ತು ವಿದ್ಯಾ ಬಾಲನ್ ಇವರ ನಡುವೆ ಕರೀನಾ ಪ್ರಚಾರದಿಂದ ಸೊರಗಿರುವುದು ನಿಜವೇ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಇಲ್ಲದ ಹೊರತಾಗಿಯೂ ಕರೀನಾ ಜನಪ್ರಿಯತೆ ಕುಂದಿಲ್ಲ. ಆಕೆ ಹೋದೆಡೆಯಲ್ಲೆಲ್ಲ ಅಭಿಮಾನಿಗಳ ದಂಡೇ ಸೇರುತ್ತದೆ. ಇತ್ತೀಚೆಗೆ ದುಬೈಗೆ 'ಪ್ರಮೋಷನ್ ಇವೆಂಟ್' ಒಂದಕ್ಕೆ ಹೋಗಿದ್ದ ಕರೀನಾ ವೇದಿಕೆಗೆ ಬಂದರೆ, ಮುಗಿಬಿದ್ದ ಅಭಿಮಾನಿಗಳು ಡ್ಯಾನ್ಸ್ ಮಾಡಬೇಕೆಂದು ಒತ್ತಾಯಿಸಿದರು. ಪ್ರೇಕ್ಷಕರ ಒತ್ತಾಯಕ್ಕೆ ಮಣಿದ ಕರೀನಾ, 'ರಾ ಒನ್' ಚಿತ್ರದ 'ಚಮಕ್ ಚಲ್ಲೊ' ಹಾಡಿಗೆ ಹೆಜ್ಜೆ ಹಾಕಿದ್ದು ಭರ್ಜರಿ ಸುದ್ದಿಯಾಗಿದೆ. ಇದರ ಚಿತ್ರವನ್ನು ಜಾಲತಾಣಗಳಲ್ಲಿ ಹಂಚಿಕೊಂಡು ಅಭಿಮಾನಿಗಳೇ ಸಂಭ್ರಮಿಸಿದ್ದಾರೆ. ಮಗುವಾದರೂ ಕರೀನಾಳ ಬಳುಕುವ ಸೊಂಟದ ಆಕರ್ಷಣೆ ಕಡಿಮೆಯಾಗಿಲ್ಲ ಎನ್ನುವುದು ಅವರ ಒಕ್ಕೊರಲ ಅಭಿಪ್ರಾಯ.

ವೃತ್ತಿಜೀವನದಲ್ಲಿ ಏರಿಳಿತದ ಸವಾಲುಗಳನ್ನು ಎದುರಿಸುವುದರಲ್ಲಿ ಕರೀನಾ ಅನುಭವಿ. ಈಗ ಆಕೆ ನಟಿಸುತ್ತಿರುವ ಹೊಸ ಚಿತ್ರ 'ವೀರೆ ಡಿ ವೆಡಿಂಗ್' ಚಿತ್ರವನ್ನೇ ಗಮನಿಸಿ. ಈ ಚಿತ್ರದಲ್ಲಿ ಸೋನಂ ಕಪೂರ್, ಸ್ವರಾ ಭಾಸ್ಕರ್ ಮತ್ತು ಶಿಖಾ ತಲ್ವಾನಿಯಾ ಎಂಬ ಅತಿಲೋಕ ಸುಂದರಿಯರ ಜತೆಗೇ ಕರೀನಾ ನಟಿಸುತ್ತಿದ್ದಾಳೆ. ಇವರೆಲ್ಲರನ್ನೂ ನಟನೆ ಮತ್ತು ಲಾವಣ್ಯದಲ್ಲಿ ಮೀರಿಸುವ ಆತ್ಮವಿಶ್ವಾಸ ಕರೀನಾಳದ್ದು. ಶಶಾಂಕ ಘೋಷ್ ನಿರ್ದೇಶನದ ಈ ಚಿತ್ರದ ಶೂಟಿಂಗ್ ಭರದಿಂದ ನಡೆದಿದೆ.